■ ಶಶಿಕುಮಾರ್ ಸಿ.




# ವಾಟ್ಸ್ಆ್ಯಪ್ ವೆಬ್‌ನಲ್ಲೂ ಸ್ಕ್ರೀನ್ ಲಾಕ್

ಕೆಲಸದ ವೇಳೆ ಕಚೇರಿಯ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್‌ಗಳಲ್ಲಿ ವಾಟ್ಸ್ಆ್ಯಪ್ ಬಳಸುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಇವರ ಅನುಕೂಲಕ್ಕೆಂದು ವಾಟ್ಸ್ಆ್ಯಪ್ ವೆಬ್ ಸ್ಕ್ರೀನ್ ಲಾಕ್ ಫೀಚರ್ ಬಿಡುಗಡೆ ಮಾಡಲಾಗಿದೆ.

### ಫೀಚರ್ ಆಯ್ಕೆ ಮಾಡುವ ವಿಧಾನ

- ಕ್ಯೂಆರ್ ಕೋಡ್ ಬಳಸಿ ವಾಟ್ಸ್ಆ್ಯಪ್‌ಗೆ ಲಾಗಿನ್ ಆಗಿ.
- ಮೆನು ಐಕಾನ್ ಕ್ಲಿಕ್ಕಿಸಿ, ಸೆಟ್ಟಿಂಗ್ಸ್‌ಗೆ ಹೋಗಿ.
- ಸೆಟ್ಟಿಂಗ್ಸ್ ಮೆನುವಿನಲ್ಲಿ ಪ್ರೈವೆಸಿ ಆಯ್ಕೆ ಒತ್ತಿ.
- ಸ್ಕ್ರಾಲ್ ಮಾಡಿ 'ಸ್ಕ್ರೀನ್ ಲಾಕ್' ಆಯ್ಕೆ ಸೆಲೆಕ್ಟ್ ಮಾಡಿ.
- ಬಳಿಕ, ಪಾಸ್‌ವರ್ಡ್ ರಚಿಸಲು ಆನ್‌ಸ್ಕ್ರೀನ್ ಸೂಚನೆಗಳನ್ನು ಪಾಲಿಸಿ.
- ನಿಮ್ಮ ಪಾಸ್‌ವರ್ಡ್ ಅಕ್ಷರಗಳು, ಸಂಖ್ಯೆಗಳು ಮತ್ತು ಸಾಮಾನ್ಯ ಚಿಹ್ನೆಗಳನ್ನು ಒಳಗೊಂಡಂತೆ 6 ರಿಂದ 128 ಅಕ್ಷರಗಳ ನಡುವೆ ಇರಬೇಕು. ಪಾಸ್‌ವರ್ಡ್ ನಮೂದಿಸಿದ ಬಳಿಕ ದೃಢೀಕರಿಸಿ ಮತ್ತು ಸರಿ ಆಯ್ಕೆಯನ್ನು ಒತ್ತಿರಿ.

ಸ್ವಯಂಚಾಲಿತ ಸ್ಕ್ರೀನ್ ಲಾಕ್ ಆಯ್ಕೆಯೂ ಇದ್ದು, ಸ್ಕ್ರೀನ್ ಲಾಕ್ ಅವಧಿಯನ್ನು ಆಯ್ಕೆ ಮಾಡಿಕೊಳ್ಳಬೇಕು. (ಉದಾಹರಣೆಗೆ: 1 ನಿಮಿಷ, 15 ನಿಮಿಷಗಳು ಅಥವಾ 1 ಗಂಟೆ) ■

# ವಾಯ್ಸ್ ಫೀಚರ್ ಉಚಿತ

ಓಪನ್‌ಎಐ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಹುದ್ದೆಯ ವಿಚಾರವಾಗಿ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ನಡುವಿನ ಭಿನ್ನಾಭಿಪ್ರಾಯವು ತಾರಕಕ್ಕೇರಿ ತಣ್ಣಗಾದ ಬೆನ್ನಲ್ಲೇ ಕಂಪನಿಯು ಚಾಟ್‌ಜಿಪಿಟಿಯ ವಾಯ್ಸ್ ಫೀಚರ್ ಅನ್ನು ತನ್ನ ಎಲ್ಲ ಬಳಕೆದಾರರಿಗೂ ಉಚಿತವಾಗಿ ಕಲ್ಪಿಸುವುದಾಗಿ ಹೇಳಿದೆ.

ಈ ಫೀಚರ್ ಅನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಹಣ ಪಾವತಿಸಿದ ಚಂದಾದಾರರಿಗೆ ಮಾತ್ರವೇ ಬಿಡುಗಡೆಗೊಳಿಸಲಾಗಿತ್ತು. ಅದೀಗ ಉಚಿತವಾಗಿ ಎಲ್ಲ ಬಳಕೆದಾರರಿಗೆ ಲಭ್ಯವಾಗಲಿದೆ. ಎಕ್ಸ್‌ನಲ್ಲಿ (ಟ್ವಿಟರ್) ಈ ಕುರಿತು ಮಾಹಿತಿ ಹಂಚಿಕೊಂಡಿರುವ ಓಪನ್‌ಎಐ, ವಾಯ್ಸ್‌ನೊಂದಿಗೆ ಚಾಟ್‌ಜಿಪಿಟಿ ಈಗ ಎಲ್ಲಾ ಉಚಿತ ಬಳಕೆದಾರರಿಗೆ ಲಭ್ಯವಿದೆ. ಅಪ್ಲಿಕೇಷನ್ ಡೌನ್‌ಲೋಡ್ ಮಾಡಿ ಮತ್ತು ಸಂಭಾಷಣೆಯನ್ನು ಪ್ರಾರಂಭಿಸಲು ಹೆಡ್‌ಫೋನ್‌ಗಳ ಐಕಾನ್ ಟ್ಯಾಪ್ ಮಾಡಿ' ಎಂದಿದೆ.

ವಾಯ್ಸ್ ಕಮಾಂಡ್ ಮೂಲಕ ಚಾಟ್‌ಜಿಪಿಟಿಯೊಂದಿಗೆ ಸಂವಹನ ನಡೆಸುವ ಸೇವೆಯೇ ವಾಯ್ಸ್ ಫೀಚರ್. ಬಳಕೆದಾರರ ಆದ್ಯತೆಗಳಿಗೆ ಅನುಗುಣವಾಗಿ ಐದು ವಿಭಿನ್ನ ಧ್ವನಿಗಳ ಮೂಲಕ ಸಂವಹನ ನಡೆಸುವ ಅವಕಾಶವು ಇದರಲ್ಲಿದೆ. ಓಪನ್‌ಎಐನ ಮಾಜಿ ಅಧ್ಯಕ್ಷ ಗ್ರೆಗ್ ಬ್ರಾಕ್‌ಮನ್, 'ವಾಯ್ಸ್ ಫೀಚರ್ ಚಾಟ್‌ಜಿಪಿಟಿ ಬಳಕೆಯ ಅನುಭವವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಸ್ಯಾಮ್ ಆಲ್ಟ್‌ಮನ್ ಅವರನ್ನು ಸಿಇಒ ಸ್ಥಾನದಿಂದ ಆಡಳಿತ ಮಂಡಳಿ ವಜಾಗೊಳಿಸಿದ್ದ ಬೆನ್ನಲ್ಲೇ ಬ್ರಾಕ್‌ಮನ್ ಅವರು ತಮ್ಮ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ್ದರು. ಇದರ ನಡುವೆ ತೀವ್ರ ಒತ್ತಡ ಎದುರಾದ ಹಿನ್ನೆಲೆ ಆಡಳಿತ ಮಂಡಳಿಯು ಸ್ಯಾಮ್ ಆಲ್ಟ್‌ಮನ್ ಅವರನ್ನು ಮತ್ತೆ ಸಿಇಒ ಸ್ಥಾನಕ್ಕೆ ನೇಮಕ ಮಾಡಿದೆ. ಸ್ಯಾಮ್ ಪರವಾಗಿ ಹೂಡಿಕೆದಾರರು ಹಾಗೂ ಕಂಪನಿಯ ಬಹುತೇಕ ಸಿಬ್ಬಂದಿಯು ತೀವ್ರ ಒತ್ತಡ ಹೇರಿದ್ದರು. ಮರು ನೇಮಕ ಮಾಡಿದ್ದರೆ ಸಾಮೂಹಿಕ ರಾಜೀನಾಮೆಯ ಬೆದರಿಕೆಯನ್ನೂ ಸಿಬ್ಬಂದಿ ಹಾಕಿದ್ದರು. ■

# ಹೊಸ ವಿನ್ಯಾಸದಲ್ಲಿ ವಾಯ್ಸ್ ಚಾಟ್

ದೊಡ್ಡ ದೊಡ್ಡ ವಾಟ್ಸ್ಆ್ಯಪ್ ಗ್ರೂಪ್‌ಗಳಿಗೆಂದೇ ವಿಶೇಷವಾದ ವಾಯ್ಸ್ ಚಾಟ್ ಫೀಚರ್ ಅನ್ನು ಕಂಪನಿಯು ಅಭಿವೃದ್ಧಿಪಡಿಸಿದ್ದು, ಶೀಘ್ರವೇ ಇದು ಬಿಡುಗಡೆಗೊಳ್ಳಲಿದೆ. ಈ ಹೊಸ ಫೀಚರ್ ಈಗಾಗಲೇ ಬಳಕೆಯಲ್ಲಿರುವ ಗ್ರೂಪ್ ಚಾಟ್ ಫೀಚರ್‌ಗಿಂತಲೂ ಬಳಕೆಸ್ನೇಹಿ.

ಗ್ರೂಪ್‌ನಲ್ಲಿರುವ ಸಂದೇಶ ಸ್ವೀಕರಿಸುವ ಎಲ್ಲ ಸದಸ್ಯರಿಗೆ ರಿಂಗ್ ಮಾಡದೆ ಧ್ವನಿ ಚಾಟ್ ಅನ್ನು ಇದು ತಲುಪಿಸುತ್ತದೆ. ನೋಟಿಫಿಕೇಷನ್ ಹಾಗೂ ಇನ್‌ಚಾಟ್ ಬಬಲ್ ಮೂಲಕ ಇದು ಸದಸ್ಯರನ್ನು ತಲುಪುತ್ತದೆ. ಕಳುಹಿಸುವಾಗಲೇ ಗ್ರೂಪ್ ಚಾಟ್ ಸದಸ್ಯರೊಂದಿಗೆ ತಕ್ಷಣ ಲೈವ್ ಆಗಿಯೂ ಮಾತನಾಡಲು ನೆರವಾಗುತ್ತದೆ. ಚಾಟ್‌ನ ಮೇಲ್ಭಾಗದಲ್ಲಿರುವ ಕಾಲ್ ಕಂಟ್ರೋಲ್‌ಗಳನ್ನು ಪ್ರವೇಶಿಸುವ ಮೂಲಕ ವಾಯ್ಸ್ ಚಾಟ್‌ನಿಂದ ಹೊರಹೋಗದೆ ಗುಂಪನ್ನು ಅನ್‌ಮ್ಯೂಟ್ ಮಾಡಲು, ಹ್ಯಾಂಗ್ ಅಪ್ ಮಾಡಲು ಅಥವಾ ಸಂದೇಶವನ್ನು ಕಳುಹಿಸಲು ಸಹಾಯ ಮಾಡುತ್ತದೆ.

33ರಿಂದ 128 ಸದಸ್ಯರು ಇರುವ ದೊಡ್ಡ ಗ್ರೂಪ್‌ಗಳಿಗೆ ಇದು ಹೆಚ್ಚು ಅನುಕೂಲ. ಇಲ್ಲಿನ ವಾಯ್ಸ್ ಚಾಟ್‌ಗಳು ಡಿಫಾಲ್ಟ್ ಆಗಿ ಎಂಡ್‌ಟುಎಂಡ್ ಎನ್‌ಕ್ರಿಪ್ಟ್ ಆಗಿರುತ್ತವೆ. ಹೆಚ್ಚುವರಿಯಾಗಿ ವಾಯ್ಸ್ ಚಾಟ್‌ನಲ್ಲಿ ಇಲ್ಲದ ಗ್ರೂಪ್‌ನ ಸದಸ್ಯರು ಚಾಟ್ ಹೆಡರ್ ಹಾಗೂ ಕಾಲ್ ಟ್ಯಾಬ್ ಮೂಲಕ ವಾಯ್ಸ್ ಚಾಟ್‌ನಲ್ಲಿ ಇರುವವರ ಪ್ರೊಫೈಲ್‌ಗಳನ್ನು ನೋಡಬಹುದು.

### ವಾಯ್ಸ್ ಚಾಟ್ ಆರಂಭಿಸುವುದು ಹೇಗೆ?

- ಗ್ರೂಪ್ ಚಾಟ್ ತೆರೆಯಿರಿ.
- ಸ್ಕ್ರೀನ್‌ನ ಮೇಲಿನ ಬಲ ಮೂಲೆಯಲ್ಲಿರುವ ವೇವ್ ಐಕಾನ್ ಟ್ಯಾಪ್ ಮಾಡಿ.
- 'ವಾಯ್ಸ್ ಚಾಟ್ ಆರಂಭಿಸಿ' ಆಯ್ಕೆ ಒತ್ತಿ.
- ವಾಯ್ಸ್ ಚಾಟ್‌ನಿಂದ ಹೊರಬರಲು ಎಕ್ಸ್ ಎಂಬ ಆಯ್ಕೆ ಟ್ಯಾಪ್ ಮಾಡಿ. ■